ಇ) *ಭಾಟಾ ಕುಂಕಿ, ಅಥರ್ಗ, ನಿಂಬಾಳ್ ಹಳ್ಳಿಗಳೇನಾದರೂ ಅಭಿವೃದ್ಧಿ ಕೆಲಸಗಳಲ್ಲಿ ಸೇರಿಸಲಾಗಿದೆಯೇ?*

ಶ್ರೀ ರಂಗದೇವರಾಯಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು) :

ಅ) ಇಂಡಿ ತಾಲ್ಲೂಕಿನಲ್ಲಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿಗಾಗಿ ಯಾವ ಹಳ್ಳಿಯನ್ನು ಗುರುತಿಸಲಾಗಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಕೃಷ್ಣ ಮತ್ತು ಕಾವೇರಿ ನೀರಾವರಿ ಯೋಜನೆಗಳ ಅನುಷ್ಠಾನ

636 - ಶ್ರೀ ವೈ.ಕೆ. ರಾಮಯ್ಯ (ಕುಣಿಕಲ್) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೃಷ್ಣಾ ಮತ್ತು ಕಾವೇರಿ ಜಲಾನಯನ ಪ್ರದೇಶದ ನೀರಾವರಿ ಯೋಜನೆಗಳ ಅನುಷ್ಠಾನಕ್ಕಾಗಿ ಈ ವರ್ಷ ಆಡಳಿತಾತ್ಮಕ ಮಂಜೂರಾತಿ ದೊರಕಿರುವ ಅಯವ್ಯಯದಲ್ಲಿ ಒದಗಿಸಿರುವ ಹಣದಲ್ಲಿ ಈ ವರೆಗೆ ಖರ್ಚಾಗಿರುವ ಹಣ ಎಷ್ಟು?*

ಆ) *ಸದರಿ ಯೋಜನೆಗಳ ಬಗ್ಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಹಣ ಎಷ್ಟು? (ಯೋಜನಾವಾರು ವಿವರಗಳನ್ನು ಒದಗಿಸುವುದು)*

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು) :

ಅ) ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆ

	1993-94ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಹಣ	1993-94ನೇ ಜೂಲೈ 93ರ ಅಂತ್ಯದವರೆಗೆ ಖರ್ಚಾಗಿರುವ ಹಣ. (ಕೋಟಿ ರೂ.ಗಳಲ್ಲಿ)
ಕೃಷ್ಣಾ ಕೊಳ್ಳದ ಯೋಜನೆ	415.29	110.99
ಕಾವೇರಿ ಕೊಳ್ಳದ ಯೋಜನೆ	282.50	75.56

ಆ) ಯೋಜನಾವಾರು ವಿವರಗಳನ್ನು ಲಗತ್ತಿಸಲಾಗಿರುವ ಪಟ್ಟಿಯಲ್ಲಿ ನೀಡಲಾಗಿದೆ.

ಶ್ರೀ ವೈ.ಕೆ. ರಾಮಯ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 636ರ ಬಗ್ಗೆ ವಿವರಗಳು.

ಕ್ರಮ ಸಂಖ್ಯೆ	ಯೋಜನೆ.	(ಹಣ : ಲಕ್ಷ ರೂ.ಗಳಲ್ಲಿ) 1993-94ನೇ ಸಾಲಿನಲ್ಲಿ ಜುಲೈ 93ರ ಅಂತ್ಯದವರೆಗೆ ಬಿಡುಗಡೆ ಯಾವ ಹಣ ಭರವಸೆ ಪತ್ರ
1	2	3
ಅ.	ಕೃಷ್ಣ ಕೊಳ್ಳದ ಯೋಜನೆಗಳು	
1.	ಕೃಷ್ಣಾ ಮೇಲ್ದಂಡೆ-1	4690.71
2.	ಘಟಪ್ರಭ-3	859.73
3.	ಮಲಪ್ರಭ	720.42
4.	ಹಿಪ್ಪರಗಿ	61.54
5.	ದೂಧಗಂಗಾ	98.36
6.	ಮಾರ್ಕಾಂಡೇಯ	88.33
7.	ರಾಮಥಾಲ್	1.32
8.	ಹರಿನಾಲಾ	51.83
9.	ತುಂಗಭದ್ರ ಎಡದಂಡೆ ಕಾಲುವೆ	154.51
10.	ತುಂಗಭದ್ರ ಬಲದಂಡೆ ಕಾಲುವೆ	27.90
11.	ಸಿಂಗಟಿಲೂರ್	25.33
12.	ಹಿರೇಹಳ್ಳ	415.28
13.	ಮಸ್ಕಿನಾಲಾ	59.29
14.	ಭದ್ರ	245.82
15.	ತುಂಗಾ ಮೇಲ್ದಂಡೆ	37.72
16.	ರಾಣೆಕೆರೆ ಪೂರಕ ನಾಲೆ	31.33
17.	ಭದ್ರಾ ಅಣೆಕಟ್ಟು ನವೀಕರಣ	11.32
18.	ಹೋದಿರಾಯನ ಹಳ್ಳ	9.73
19.	ಇಟಗಿ ಸಾಸಲವಾಡ	-
20.	ಬಸಾಪುರ	-
21.	ಭೀಮ ನದಿ ನೀರಾವರಿ	12.89
22.	ಬೆಣ್ಣೆತೋರ	94.03
23.	ಭೀಮ ಮತ್ತು ನೀರಾವರಿ	42.83
24.	ಅಮರ್ಜ	126.29
25.	ಮುಲ್ಲಾಮಾರಿ ಮೇಲ್ದಂಡೆ	47.17
26.	ಮುಲ್ಲಾಮಾರಿ ಕೆಳದಂಡೆ	127.55

27. ಗಂದೋರಿನಾಲ	29.50
28. ಕಾಗ್ನಾ	6.18
29. ರಾಷ್ಟ್ರೀಯ ಜಲನಿರ್ವಹಣೆ ಯೋಜನೆ	627.87
30. ಹಳೇ ಕಾಲುವೆಗಳ ಜೀರ್ಣೋದ್ಧಾರ	16.66
ಆ. ಕಾವೇರಿ ಕೊಳ್ಳದ ಯೋಜನೆಗಳು	
1. ಕೃಷ್ಣಾ ರಾಜನಾಗರ ಆಧುನೀಕರಣ	160.72
2. ಹಾರಂಗಿ	423.06
3. ಕಬಿನಿ	583.67
4. ಡಿ.ದೇವರಾಜೆ ಅರಸ್ ಕಾಲುವೆ	297.38
5. ಹೇಮಾವತಿ	2939.89
6. ಯಗಚಿ	498.40
7. ಮಂಚನ ಬೆಲೆ	51.54
8. ತಾರಕ	75.74
9. ಹೋಟೆಹೊಳೆ	4.15
10. ಅರ್ಕಾವತಿ	211.26
11. ಚಿಕ್ಕಹೊಳೆ	54.69
12. ಇಗ್ಗಲೂರು	147.52
13. ಉಡುತೊರೆ ಹಳ್ಳ	524.51
14. ಕಾಚೇನಹಳ್ಳಿ	34.65
15. ಹುಚ್ಚನ ಕೊಪ್ಪಲು	61.74
16. ಕಾಮಸಮುದ್ರ	
17. ಹಳೇ ಕಾಲುವೆಗಳ ಜೀರ್ಣೋದ್ಧಾರ	90.16

ರಾಜ್ಯದಲ್ಲಿ ಭಾಗ್ಯ ಜ್ಯೋತಿ ಯೋಜನೆ

659 - ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಉಪ ಮುಖ್ಯಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ನೇ ಸಾಲಿನಲ್ಲಿ ರಾಜ್ಯದಲ್ಲಿ ಪ್ರತಿ ತಾಲ್ಲೂಕಿಗೆ ಮಂಜೂರಾದ ಭಾಗ್ಯಜ್ಯೋತಿ ದೀಪಗಳೆಷ್ಟು?

ಆ) ಇವುಗಳಿಗೆ ವಿದ್ಯುಚ್ಛಕ್ತಿ ಒದಗಿಸಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಕರ್ನಾಟಕ ಸರ್ಕಾರವು ನಿರ್ದೇಶನ ನೀಡಿರುವುದೆ?

ಇ) ಇಲ್ಲದಿದ್ದರೆ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ನಿರ್ದೇಶನ ನೀಡಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೆ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) 1993-94ನೇ ಸಾಲಿನಲ್ಲಿ ತಾಲ್ಲೂಕುವಾರು ಭಾಗ್ಯಜ್ಯೋತಿ ದೀಪಗಳ ಗುರಿಯನ್ನು ನಿಗಧಿಪಡಿಸಿರುವುದಿಲ್ಲ. ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ 1000 ಭಾಗ್ಯ ಜ್ಯೋತಿ ದೀಪಗಳನ್ನು ಅಳವಡಿಸಲು ತೀರ್ಮಾನಿಸಿದೆ.

ಆ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಕ್ರಮ ಕೈಗೊಳ್ಳಲು ನಿರ್ದೇಶಿಸಿದೆ.

ಇ) ಉದ್ಭವಿಸುವುದಿಲ್ಲ.